## **ಕಾರ್ಮಿಕ ನ್ಯಾಯಾಲಯ, ಮೈಸೂರು.**

## **Ref**: 29/2021

ಡಬ್ಲ್ಯೂ. ಡಬ್ಲ್ಯೂ-1

**ದಿನಾಂಕ 18.07.2023 ರಂದು ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು**

**ಮುಂದುವರೆದ ಪಾಟೀಸವಾಲುಃ 2 ನೇ ಪಕ್ಷಗಾರರ ಪರ ಶ್ರೀ.ಜೆ.ಸಿ.ರವರಿಂದ:**

ನಾನು 2 ನೇ ಪಕ್ಷಗಾರರ ಸಂಸ್ಥೆಯಲ್ಲಿ ಕೆಲಸವನ್ನು ಮಾಡುವ ಸಮಯದಲ್ಲಿ ದುರ್ನಡತೆಗಳನ್ನು ಮಾಡಿದ್ದೆ ಎಂಬ ಕಾರಣಕ್ಕೆ ನೋಟೀಸ್ ನ್ನು ಕೊಟ್ಟು ನನ್ನನ್ನು ಕೆಲಸದಿಂದ ಅಮಾನತ್ತು ಮಾಡಿ ನಂತರ ಆಂತರಿಕ ವಿಚಾರಣೆಯನ್ನು ನಡೆಸಿ ಕೆಲಸದಿಂದ ತೆಗೆದಿರುತ್ತಾರೆ ಎನ್ನುವುದು ನಿಜ. ಸದರಿ ಆದೇಶದ ಮನ್ನಣೆಗೆ 2 ನೇ ಪಕ್ಷಗಾರರ ಸಂಸ್ಥೆಯೂ ಗೌ.ಔಧ್ಯಮಿಕ ನ್ಯಾಯಾಧೀಕರಣದಲ್ಲಿ ಕಲಂ.33(2)(ಬಿ) ಅರ್ಜಿಯನ್ನು ಸಲ್ಲಿಸಿದ್ದರು ಎನ್ನುವುದು ನಿಜ.

2 ನೇ ಪಕ್ಷಗಾರರ ಸಂಸ್ಥೆಯೂ ಕಾರ್ಮಿಕರನ್ನು ತಿರುಪತಿಯ ಕಾರ್ಖಾನೆಗೆ ವರ್ಗಾವಣೆ ಮಾಡಿದ್ದಾಗ ನನ್ನನ್ನು ವರ್ಗಾವಣೆ ಮಾಡಿರಲಿಲ್ಲ. ಸದರಿ ತಿರುಪತಿಯ ಕಾರ್ಖಾನೆಯಲ್ಲಿ ವರ್ಗಾವಣೆಗೊಂಡ ಕಾರ್ಮಿಕರಿಗೆ ಏನು ಸಂಗತಿಗಳು ನಡೆದಿತ್ತು ಎಂದು ನನಗೆ ವೈಯಕ್ತಿಕವಾಗಿ ಮಾಹಿತಿ ಇಲ್ಲ. ಆದರೇ ಕೇಳಿ ತಿಳಿದುಕೊಂಡಿರುತ್ತೇನೆ. ನಾನು ಸದರಿ ತಿರುಪತಿಯ ಕಾರ್ಖಾನೆಗೆ 2 ಬಾರಿ ಬೇಟಿಕೊಟ್ಟಿರುತ್ತೇನೆ. ಆದರೇ ಯಾವ ದಿನಾಂಕ ಎಂದು ನನಗೆ ನೆನಪಿಲ್ಲ. ಯಾವ ಸಮಯದಲ್ಲಿ ನೀವು ಹೋಗಿದ್ದಿರಿ ಎಂಬ ಪ್ರಶ್ನೆಗೆ ಸಾಕ್ಷಿಯೂ ಆಡಳಿತ ಮಂಡಳಿಯೂ ಕಾರ್ಖಾನೆಯನ್ನು ಲಾಕ್ಔಟ್ ಮಾಡಿದ ಸಮಯದಲ್ಲಿ ಕಾರ್ಮಿಕರು ಮುಷ್ಕರ ನಿರತರಾಗಿದ್ದಾಗ ಹೋಗಿದ್ದೇನು ಎಂದು ಹೇಳುತ್ತಾರೆ. ಆಡಳಿತ ಮಂಡಳಿಯೂ ಲಾಕ್ಔಟ್‌ನ್ನು ಮಾಡಿರಲಿಲ್ಲ ಎನ್ನುವುದು ಮತ್ತು ಕಾರ್ಮಿಕರು ಮೈಸೂರಿಂದ ತಿರುಪತಿಗೆ ವರ್ಗಾವಣೆ ಮಾಡಿದ್ದರಿಂದ ಮುಷ್ಕರವನ್ನು ಮಾಡಿದ್ದರು ಎನ್ನುವುದು ಸರಿಯಲ್ಲ.

ಮೈಸೂರುನಿಂದ ತಿರುಪತಿಗೆ 94 ಜನ ಕಾರ್ಮಿಕರನ್ನು 2 ನೇ ಪಕ್ಷಗಾರರ ಸಂಸ್ಥೆಯೂ ವರ್ಗಾವಣೆ ಮಾಡಿತ್ತು. ಈ ಪ್ರಕರಣದಲ್ಲಿ 45 ಜನ ಕಾರ್ಮಿಕರು ಪ್ರಕರಣವನ್ನು ಹೂಡಿರುತ್ತಾರೆ. ಕಾರ್ಮಿಕರನ್ನು ವರ್ಗಾವಣೆ ಮಾಡಿದಾಗಿನಿಂದ ಪ್ರಕರಣವನ್ನು ಹೂಡುವ ಸಮಯದವರೆಗೂ ಆದ ಘಟನಾವಳಿಗಳ ಕುರಿತು ನನಗೆ ವೈಯಕ್ತಿಕವಾಗಿ ಮಾಹಿತಿ ಇದೆ. ಯಾವ ಘಟನೆಗಳು ನಡೆದಿತ್ತು ಎಂಬ ಪ್ರಶ್ನೆಗೆ ಸಾಕ್ಷಿಯೂ 2017-2018 ನೇ ಸಾಲಿನಲ್ಲಿ ಸಂಘದ ಸಧ್ಯಸ್ಯರು COD

ಯನ್ನು ಸಲ್ಲಿಸಿದ್ದು, ಆಗ ಆಡಳಿತ ಮಂಡಳಿಯೂ ಸಂಘದ ಚಟುವಟಿಕೆಗಳನ್ನು ಹತ್ತಿಕ್ಕಲ್ಲು ಸಂಘದ ಕೆಲವೊಂದು ಸದಸ್ಯರನ್ನು ತಿರುಪತಿಯ ಕಾರ್ಖಾನೆಗೆ ವರ್ಗಾವಣೆಯನ್ನು ಮಾಡಿದ್ದು, ಆಗ ಅದರ ವಿರುದ್ಧ ಮುಷ್ಕರಗಳನ್ನು ಮಾಡಿ ಕಾರ್ಮಿಕ ಇಲಾಖೆಯ ಸಮಾಲೋಚನೆಯೊಂದಿಗೆ 94 ಜನ ಕಾರ್ಮಿಕರು ಮಹಿಳಾ ಕಾರ್ಮಿಕರನ್ನು ಸೇರಿ ತಿರುಪತಿಯ ಕಾರ್ಖಾನೆಯ ಕೆಲಸಕ್ಕೆ ಹೋದ ಸಮಯದಲ್ಲಿ ಅಲ್ಲಿ ಯಾವುದೇ ಮೂಲಭೂತ ಸೌಕರ್ಯ, ವಸತಿ ಮತ್ತು ಇನ್ನಿತರೇ ಸೌಲಭ್ಯಗಳು ಇಲ್ಲದೇ ಇದ್ದು ಮತ್ತು ಕಾರ್ಖಾನೆಯೂ ಚಾಲನೆಯ ಸ್ಥಿತಿಯಲ್ಲಿ ಇಲ್ಲದೇ ಇರುವುದನ್ನು ಗಮನಿಸಿ ಕಾರ್ಮಿಕರು ಸದರಿ ರಾಜ್ಯದ ಕಾರ್ಮಿಕ ಇಲಾಖೆಯ ಸಮಾಲೋಚನೆಯೊಂದಿಗೆ ಕೆಲಸವನ್ನು ಸುಮಾರು ದಿನಗಳ ಕಾಲ ಕಷ್ಟಪಟ್ಟು ಮಾಡಿ ಆ ನಂತರ ರಜೆಯ ಮೇಲೆ ಕಾರ್ಮಿಕರು ಮೈಸೂರಿಗೆ ಬಂದ ನಂತರ ಕೆಲಸಕ್ಕೆ ಅವರನ್ನು ಹಿಂದಿರುಗಿಸಲು ಆಡಳಿತ ಮಂಡಳಿಯೂ ನಿರಾಸಕ್ತಿ ತೋರಿದ್ದರಿಂದ ಕಾರ್ಮಿಕ ಇಲಾಖೆಯೂ ಮಧ್ಯಸ್ಥಿಕೆಯನ್ನು ವಹಿಸಿ ಮಹಿಳಾ ಕಾರ್ಮಿಕರನ್ನು ಹೊರತುಪಡಿಸಿ ಪುರುಷ ಕಾರ್ಮಿಕರನ್ನು ಸದರಿ ಸ್ಥಳಕ್ಕೆ 7–8 ನಿಭಂದನೆಗಳ ಮೇರೆಗೆ ಹೋಗಿದ್ದು, ಅಲ್ಲಿ ಸದರಿ ಕಾರ್ಮಿಕರು ಕೋವಿಡ್ ಕಾಲದವರೆಗೆ ಕೆಲಸವನ್ನು ಮಾಡಿ ಆ ನಂತರ ಸದರಿಯವರನ್ನು 2 ನೇ ಪಕ್ಷಗಾರರ ಆಡಳಿತ ಮಂಡಳಿಯೂ ಕಾರ್ಖಾನೆಯನ್ನು ಲಾಕೌಟ್ ಮಾಡಲಾಗಿದೆ ಎಂಬ ಕಾರಣಕ್ಕೆ ಕೆಲಸದಿಂದ ತೆಗೆದಿರುತ್ತಾರೆ ಎಂದು ಹೇಳುತ್ತಾರೆ.

ಕಾರ್ಮಿಕರನ್ನು ವರ್ಗಾವಣೆ ಮಾಡುವುದಕ್ಕಿಂತ ಮೊದಲು 2 ನೇ ಪಕ್ಷಗಾರರ ಆಡಳಿತ ಮಂಡಳಿಯೂ ತಿರುಪತಿಯ ಕಾರ್ಖಾನೆಯೂ ದೊಡ್ಡ ಪ್ರಮಾಣದ ಉತ್ಪಾದನೆಯನ್ನು ಹೊಂದಿರುತ್ತದೆ ಎಂದು ಮತ್ತು ಕೇಂದ್ರ ಸರ್ಕಾರದ ಬಹು ದೊಡ್ಡ ಬೇಡಿಕೆಯ ಸರಕುಗಳ ಉತ್ಪಾದನೆಯನ್ನು ಮಾಡ ಬೇಕೆಂದು ಎಂದು ತಿಳಿಸಿದ್ದರು. 2 ನೇ ಪಕ್ಷಗಾರರ ಸಂಸ್ಥೆಯೂ Original Equipment Manufactures and Original Design Manufacturers ಗೆ Circuit Board ಗಳನ್ನು ಕಳುಹಿಸುತಿತ್ತು ಎನ್ನುವುದು ನಿಜ. ಸದರಿ ಉತ್ಪಾದನೆಯ ಸಂಸ್ಥೆಗಳು ತಿರುಪತಿಯಲ್ಲಿ ನಡೆಯುತ್ತಿದ್ದವು ಎನ್ನುವುದು ನಿಜ. ಸದರಿ ಸಂಸ್ಥಗಳಿಗೆ ಅನುಕೂಲವಾಗಲೇಂದು 2 ನೇ ಪಕ್ಷಗಾರರ ಸಂಸ್ಥೆಯೂ ತಿರುಪತಿಯಲ್ಲಿ ಕಾರ್ಖಾನೆಯನ್ನು ಪ್ರಾರಂಭ ಮಾಡಿದ್ದರು ಎನ್ನುವುದು ಸುಳ್ಳು. ವರ್ಗಾವಣೆಗೊಂಡ 94 ಜನ ಕಾರ್ಮಿಕರು Printed Circuit Board ಗಳನ್ನು ತಯಾರಿಸುವಲ್ಲಿ ನುರುತ ಕಾರ್ಮಿಕರಾಗಿದ್ದರು ಎನ್ನುವುದು ನಿಜ.

ಕಾರ್ಮಿಕರನ್ನು ತಿರುಪತಿಗೆ ವರ್ಗಾವಣೆ ಮಾಡುವ ಸಮಯದಲ್ಲಿ ನಮ್ಮ ಸಂಘದಿಂದ ಕಾರ್ಮಿಕ ಇಲಾಖೆಯಲ್ಲಿ ಒಂದು ವ್ಯಾಜ್ಯವನ್ನು ಹೂಡಿದ್ದೆವು ಎನ್ನುವುದು ನಿಜ. ಆಗ ಶಶಿಕುಮಾರ್ ಎಂ.ಕೆ ಅಧ್ಯಕ್ಷರು ಮತ್ತು ಮುರಳಿಧರ್ ಪೇಶ್ವಾ ಸಲಹೆಗಾರರು ಸಂಧಾನ ಪ್ರಕ್ರಿಯೆಯಲ್ಲಿ ಭಾಗವಹಿಸುತ್ತಿದ್ದರು ಎನ್ನುವುದು ನಿಜ. ಮುರಳಿಧರ್ ಪೇಶ್ವಾ ತಿರುಪತಿಯ ಕಾರ್ಖಾನೆಯ ಸ್ಥಳ ಪರಿವೀಕ್ಷಣೆ ಮಾಡಿ ವರದಿಯನ್ನು ಕೊಟ್ಟ ಆಧಾರದಲ್ಲಿ ಕಾರ್ಮಿಕರು ಸದರಿ ಸ್ಥಳಕ್ಕೆ ಕೆಲಸಕ್ಕೆ ಹೋಗಿದ್ದರು ಎನ್ನುವುದು ಸರಿಯಲ್ಲ. ಸಾಕ್ಷಿ ಹೇಳುತ್ತಾರೆ. ಕೆಲಸವನ್ನು ಕಳೆದುಕೊಳ್ಳುತ್ತೇವೆ ಎಂಬ ಒತ್ತಡದಲ್ಲಿ ಹಾಗೂ ವೇತನ ಇಲ್ಲದ ಕಾರಣಕ್ಕೆ Deputation ಆಧಾರದಲ್ಲಿ ಹೋಗಿದ್ದರು. 2 ನೇ ಪಕ್ಷಗಾರರ ಸಂಸ್ಥೆಯೂ ಸದರಿ ತಿರುಪತಿಯಲ್ಲಿಯ ಕಾರ್ಖಾನೆಯನ್ನು ನಡೆಸುವ ಸ್ಥಳದ ಪರವಾನಿಗೆಯನ್ನು ಕೇವಲ ಒಂದು ವರ್ಷದ ಅವಧಿಗೆ ಮಾತ್ರ ಮಾಡಿಕೊಂಡಿದ್ದರು. ಆದರೇ ಕಾರ್ಮಿಕರೊಂದಿಗೆ 2 ವರ್ಷದ ಅವಧಿಗೆ ಒಪ್ಪಂದವನ್ನು ಮಾಡಿಕೊಂಡಿದ್ದರು. ಸದರಿ ಅವಧಿಯೂ 1 ವರ್ಷ ಅಲ್ಲ ಎನ್ನುವುದು ಮತ್ತು 3 ವರ್ಷದ ಅವಧಿ ಆಗಿತ್ತು ಎನ್ನುವುದು ಸುಳ್ಳು. ನಮಗೆ ಸದರಿ ಕರಾರಿನ ಕುರಿತು ಸರಿಯಾದ ಮಾಹಿತಿ ಇಲ್ಲದೇ ಇದ್ದರು ಕಾರ್ಮಿಕರಿಗೆ ತಪ್ಪು ಮಾಹಿತಿಯನ್ನು ನೀಡಿ ಮುಷ್ಕರವನ್ನು ಮಾಡಿಸಿದ್ದೇವು ಎನ್ನುವುದು ಸರಿಯಲ್ಲ.

ನನಗೆ ತಿರುಪತಿಯ ಕಾರ್ಖಾನೆಯ ಕುರಿತು ವೈಯಕ್ತಿಕವಾದ ಮಾಹಿತಿ ಇಲ್ಲ ಎನ್ನುವುದು ಸರಿಯಲ್ಲ. ಕಾರ್ಮಿಕರು ತಿರುಪತಿ

ಕಾರ್ಖಾನೆಯ ಆವರಣದಲ್ಲಿ ವಿನಾಕಾರಣ 2 ನೇ ಪಕ್ಷಗಾರರ ಸಂಸ್ಥೆಯೂ ಸದರಿ ಸ್ಥಳದಲ್ಲಿ ಕಾರ್ಖಾನೆಯನ್ನು ನಡೆಸಬಾರದೆಂದು ಮತ್ತು ಕಾರ್ಮಿಕರನ್ನು ಮೈಸೂರಿಗೆ ಮರುವರ್ಗಾವಣೆ ಮಾಡಲಿ ಎಂಬ ಉದ್ದೇಶದಿಂದ ಮುಷ್ಕರಗಳನ್ನು ಮಾಡಿದ್ದರು ಎನ್ನುವುದು ಸರಿಯಲ್ಲ.

ಕಾರ್ಮಿಕ ಇಲಾಖೆ ಬೆಂಗಳೂರಿನಲ್ಲಿ ಆದ ಸಮಾಲೋಚನೆಯಂತೆ ಶ್ರೀ. ಮುರಳಿಧರ ಪೇಶ್ವಾ ಸ್ದಳ ಪರಿಶೀಲನೆ ಮಾಡಿ ಕಾರ್ಮಿಕರ ವಾಸದ ಸಲುವಾಗಿ ಸ್ದಳ ನಿಗದಿಮಾಡಿ ಆಡಳಿತ ಮಂಡಳಿಯೂ ಕಾರ್ಮಿಕರಿಗೆ ವಾಸಕ್ಕೆ ಅನುಕೂಲ ಮಾಡುವ ಕಾರಣಕ್ಕೆ ವೇತನ ಸಹಿತ 15 ದಿನಗಳ ರಜೆ ಮಂಜೂರು ಮಾಡಿದ್ದರು ಎನ್ನುವುದು ನಿಜ. ಆ ನಂತರ ಕಾರ್ಮಿಕರು ಕೆಲಸವನ್ನು ಪ್ರಾರಂಭಿಸಿದ್ದರು ಎನ್ನುವುದು ನಿಜ.

ತಿರುಪತಿಯ ಕಾರ್ಮಿಕ ಇಲಾಖೆಯಲ್ಲಿ ನಮ್ಮ ಸಂಘದಿಂದ ಕಾರ್ಮಿಕರು ವ್ಯಾಜ್ಯಗಳನ್ನು ಹೂಡಿದ್ದರು ಎನ್ನುವುದು ನಿಜ. ತಿರುಪತಿಯ ಕಾರ್ಮಿಕ ಇಲಾಖೆಗೆ ಬೇಡಿಕೆ ಪಟ್ಟಿಯನ್ನು ಕೊಟ್ಟಿದ್ದರು ಎನ್ನುವುದು ನಿಜ. ಸದರಿ ಇಲಾಖೆಯ

ವ್ಯಾಜ್ಯಗಳು ಇಲ್ಲಿಯವರೆಗೂ ತಿರ್ಮಾನ ಮಾಡಿಲ್ಲ. ಸದರಿ ವ್ಯಾಜ್ಯಗಳ ಪ್ರತಿಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ. ಈ ಪ್ರಕರಣದ 1 ನೇ ಪಕ್ಷಗಾರ ಕಾರ್ಮಿಕರನ್ನು 2 ನೇ ಪಕ್ಷಗಾರರ ಸಂಸ್ಥೆಯೂ Retrenchment ಮಾಡುವ ಸಮಯದಲ್ಲಿ ಸದರಿಯವರು ತಿರುಪತಿಯ ಕಾರ್ಖಾನೆಯಲ್ಲಿ ಕೆಲಸವನ್ನು ಮಾಡುತ್ತಿದ್ದರು ಎನ್ನುವುದು ನಿಜ. ಆ ಸಮಯದಲ್ಲಿ ಕಾನೂನು ಬದ್ಧವಾದ ಪರಿಹಾರವನ್ನು ಸದರಿ ಕಾರ್ಮಿಕರಿಗೆ 2 ನೇ ಪಕ್ಷಗಾರರ ಸಂಸ್ಥೆಯೂ ಕೊಟ್ಟಿತ್ತು ಎನ್ನುವುದು ಸರಿಯಲ್ಲ. ಸರಿಯಾದ ಪರಿಹಾರವನ್ನು ಕೊಟ್ಟಿಲ್ಲ ಎಂದು ಸದರಿ ಕಾರ್ಮಿಕರು ತಿರುಪತಿಯ ಕಾರ್ಮಿಕ ಇಲಾಖೆ ಮತ್ತು ನ್ಯಾಯಾಲಯದಲ್ಲಿ ಯಾವುದೇ ವ್ಯಾಜ್ಯವನ್ನು ಹೂಡಿರುವುದಿಲ್ಲ. 1 ನೇ ಪಕ್ಷಗಾರರ ಕಾರ್ಮಿಕರು ತಿರುಪತಿಯ ಕಾರ್ಖಾನೆಯ ಕಾರ್ಮಿಕರಾಗಿದ್ದರಿಂದ ಅವರ Retrenchment ಗೆ ಸಂಬಂಧಪಟ್ಟ ವಿವಾದವನ್ನು ತಿರುಪತಿಯ ಕಾರ್ಮಿಕ ಇಲಾಖೆಗೆ ಸಲ್ಲಿಸಬೇಕು ಎನ್ನುವುದು ಮತ್ತು ಮೈಸೂರಿನ ಕಾರ್ಮಿಕ ಇಲಾಖೆಯ ವ್ಯಾಪ್ತಿಯಲ್ಲಿ ಬರುವುದಿಲ್ಲ ಎನ್ನುವುದು ಸರಿಯಲ್ಲ.

2 ನೇ ಪಕ್ಷಗಾರರ ಸಂಸ್ಥೆಯೂ ತಿರುಪತಿಯಲ್ಲಿ ಕಾರ್ಖಾನೆಯನ್ನು ಪ್ರಾರಂಭ ಮಾಡಬಾರದು ಎಂದು ಮತ್ತು ನಡೆಸಬಾರದು ಎಂದು ನಮ್ಮ ಸಂಘ ಆಡಳಿತ ಮಂಡಳಿಗೆ ಬಹಳಷ್ಟು ಕಿರುಕುಳವನ್ನು ಕೊಟ್ಟಿದ್ದಾರೆ ಎನ್ನುವುದು ಸರಿಯಲ್ಲ. ಅದಕ್ಕೆ ಸಂಬಂಧಪಟ್ಟ ಕೆಲವೊಂದು ಪ್ರಕರಣದಲ್ಲಿ ಮಾನ್ಯ ಉಚ್ಚ ನ್ಯಾಯಾಲಯ Stay ಯನ್ನು ನೀಡಿರುತ್ತದೆ ಎನ್ನುವುದು ನನಗೆ ಗೊತ್ತಿಲ್ಲ. ಕಾರ್ಮಿಕರು ಮುಷ್ಕರ ನಿರತ ಸಮಯದಲ್ಲಿ 2 ನೇ ಪಕ್ಷಗಾರ ಸಂಸ್ಥೆಯ ಆಡಳಿತ ಮಂಡಳಿಯೂ ಕಾಳಹಸ್ತಿ ಸಿವಿಲ್ ನ್ಯಾಯಾಲಯದಲ್ಲಿ ಮನಾಹಿ ಆದೇಶಕ್ಕಾಗಿ ದಾವೆಯನ್ನು ಹೂಡಿದ್ದರು ಎನ್ನುವುದು ನಿಜ. ಕಾರ್ಮಿಕರಿಗೆ ವೇತನವನ್ನು ತಿರುಪತಿಯ ಕಾರ್ಖಾನೆಯಿಂದಲೇ ಕೊಡುತ್ತಿದ್ದು, ಇ.ಎಸ್.ಐ ಮತ್ತು ಪಿ.ಎಫ್ ಸಹ ಅದೇ ಕಾರ್ಖಾನೆಯ ಕೋಡ್ ಸಂಖ್ಯೆಯಿಂದ ಕೊಡುತ್ತಿದ್ದರು ಎನ್ನುವುದು ನಿಜ. 2 ನೇ ಪಕ್ಷಗಾರರ ಸಂಸ್ಥೆಯೂ 1 ನೇ ಪಕ್ಷಗಾರ ಕಾರ್ಮಿಕರನ್ನು ಕಾನೂನು ಬದ್ಧವಾಗಿ retrenchment ಮಾಡಿದ್ದರು ಸಹ ಸತ್ಯ ಸಗಂತಿಗಳನ್ನು ಮರೆಮಾಚಿ ವ್ಯಾಜ್ಯವನ್ನು ಹೂಡಿದ್ದೇವೆ ಎನ್ನುವುದು ಸರಿಯಲ್ಲ. ವ್ಯಾಜ್ಯ ಕಾರಣ ತಿರುಪತಿಯಲ್ಲಿ ಉಂಟಾಗಿದ್ದರು ಮತ್ತು ಈ ನ್ಯಾಯಾಲಯಕ್ಕೆ ಯಾವುದೇ ವ್ಯಾಜ್ಯಕಾರಣ ಇಲ್ಲದೇ ಇದ್ದರು ಸುಳ್ಳು ಪ್ರಕರಣವನ್ನು ಹೂಡಿದ್ದೇವೆ ಎನ್ನುವುದು ಸರಿಯಲ್ಲ.

ನನಗೆ ಪ್ರಕರಣದ ಕುರಿತು ಯಾವುದೇ ಮಾಹಿತಿ ಇಲ್ಲದೇ ಇದ್ದರು ನಾನು ಕೇವಲ ಸಂಘದ ಪದಾಧಿಕಾರಿ ಆದ ಕಾರಣಕ್ಕೆ ಮತ್ತು ಕಾರ್ಮಿಕರಿಗೆ ಸಹಾಯ ಮಾಡಬೇಕೆಂಬ ಉದ್ದೇಶದಿಂದ ಸುಳ್ಳು ಸಾಕ್ಷಿಯನ್ನು ಹೇಳುತ್ತಿದ್ದೇನೆ ಎನ್ನುವುದು

ಸರಿಯಲ್ಲ.  ನನ್ನನ್ನು ಕೆಲಸದಿಂದ ಆಡಳಿತ ಮಂಡಳಿಯೂ ವಜಾ ಮಾಡಿದ ಕಾರಣದ ದ್ವೇಶಕ್ಕೆ ಸುಳ್ಳು ಸಾಕ್ಷಿಯನ್ನು ಹೇಳುತ್ತಿದ್ದೇನೆ ಎನ್ನುವುದು ಸರಿಯಲ್ಲ.

**ಮರುವಿಚಾರಣೆಃ** ಇಲ್ಲ.

(ಸಾಕ್ಷಿಯ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಖ್ತಲೇಖನಕ್ಕೆ ಬೆರಳಚ್ಚು ಮಾಡಿದೆ.)

(ಮೇಲಿನ ಸಾಕ್ಷ್ಯವನ್ನು  ಸಾಕ್ಷಿಗೆ ಓದಿ, ತಿಳಿಸಿ, ಹೇಳಿದಾಗ, ಅವರು ಅದು ಸರಿ ಇದೆ ಎಂದು ಒಪ್ಪಿದ್ದಾರೆ.)

Sd/-

**ಅಧ್ಯಕ್ಷಾಧಿಕಾರಿಗಳು,**
**ಕಾರ್ಮಿಕ ನ್ಯಾಯಾಲಯ, ಮೈಸೂರು**